ಕೇಪರ್ಸ್ ಷಾಪನ್ನೂ ತೆಗೆದಿದ್ದರು, ಅವರನ್ನು ಆ ಷಾಪನ್ನು ಮುಚ್ಚು ಎಂದು ಹೇಳಿದಾಗ ಅವರು ಮುಚ್ಚಲಿಲ್ಲ. ಆದುದರಿಂದ ಈ ಕೋಮಿನವರು ಆ ಕೋಮಿನವರ ಮೇಲೆ ಪ್ರತೀಕಾರ ಮಾಡಬೇಕಾಗಿ ಬಂತು ಎಂದು ಈರೀತಿ ಇದೆ. ಆದುದರಿಂದ ನಾನು ಕೇಳುವುದು ಏನೆಂದರೆ ಈ ಬಗ್ಗೆ ಸರಿಯಾದ ತನಿಖೆ ಆಗಿ ಬಂದಮೇಲೆ ಆ ತನಿಖೆಯ ವರದಿಯನ್ನು ಈ ಮನೆಯ ಮುಂದೆ ಇಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ತನಿಖೆಯನ್ನು ಸಮಗ್ರವಾಗಿ ಮಾಡುತ್ತೇವೆ. ಆದರೆ ಅದನ್ನು ಈ ಮನೆಯ ಮುಂದೆ ಇಡುವುದು ಉಚಿತವಲ್ಲ. ಅಷ್ಟು ಮಾತ್ರ ಹೇಳುತ್ತೇನೆ.

First report on action taken by Government on the Reports of the Committee on Estimates.

Presentation

Sri K. F. PATIL (Byadgi).—I present the First Report on action taken by Government on the reports of the Committee on Estimates.

MADAM SPEAKER.—The Report is presented.

[Notice of Adjournment Motion]

Re : De-recognition of State Medical colleges in the State.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಅಧ್ಯಕ್ಷರೇ, ನಮ್ಮ ರಾಜ್ಯದ 6 ಮೆಡಿಕಲ್ ಕಾಲೇಜುಗಳಿಗೆ ಮನ್ನಣೆ ರದ್ದು ಮಾಡುವಂಥ ವಿಷಯ ಪತ್ರಿಕೆಯಲ್ಲಿ ಬಂದಿದೆ. ಆದರ ಬಗ್ಗೆ ಮಾನ್ಯ ಮಂತ್ರಿಗಳಿಂದ ಉತ್ತರ ಕೇಳಲು ಬಯಸುತ್ತೇನೆ.

ಅಧ್ಯಕ್ಷರು.—ಆ ಬಗ್ಗೆ ಶ್ರೀ ಶಾಮಣ್ಣನವರು ಮತ್ತು ಜಯಪ್ರಕಾಶ ನಾರಾಯಣ್‌ರವರು ಒಂದು ಕಾಲ್ ಅಟೆನ್‌ಷನ್ ನೋಟೀಸು ಕೊಟ್ಟಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಇದು ಪ್ರಾಮುಖ್ಯವಾದ ವಿಚಾರ. ನಮ್ಮ ರಾಜ್ಯದ 6 ಮೆಡಿಕಲ್ ಕಾಲೇಜುಗಳಿಗೆ ಮನ್ನಣೆ ರದ್ದು ಮಾಡುವುದಕ್ಕೆ ಆಲ್ ಇಂಡಿಯಾ ಮೆಡಿಕಲ್ ಕೌನ್ಸಿಲ್ ನವರು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಹೀಗಿದ್ದ ಮೇಲೆ ಇದರ ಜೊತೆಗೆ ನಮ್ಮ ಹುಡುಗರು ಏನು ಡಿಗ್ರಿ ಪಡೆದಿದ್ದಾರೆ ಅವರ ಭವಿಷ್ಯ ಅನಿಶ್ಚಿತ ಸ್ಥಿತಿಯಲ್ಲಿ ಇರುವುದರಿಂದ ಇದರ ಬಗ್ಗೆ ಮಾನ್ಯ ಆರೋಗ್ಯ ಸಚಿವರು ಇದನ್ನು ಸ್ಪಷ್ಟೀಕರಣ ಮಾಡಬೇಕು ಎಂದು ಕೇಳುತ್ತೇನೆ. ಮತ್ತು ಇದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಕೋಚೆ).—ಅಧ್ಯಕ್ಷರೇ, ನನ್ನ ಮಕ್ಕಳೂ ಸಹ ದಾವಣಗೆರೆಯಲ್ಲಿ ಓದುತ್ತಿದ್ದಾರೆ. ಅಲ್ಲಿ ಪಾಠ ಪ್ರವಚನಗಳು ಚೆನ್ನಾಗಿ ನಡೆಯುತ್ತಿವೆ ಎಂದು ಕೇಳಿದ್ದೇನೆ. ಅಲ್ಲದೆ ಶ್ರೀಮಾನ್ ಸಿದ್ದವೀರಪ್ಪನವರು ಮಂತ್ರಿಗಳಾಗಿ ಬಂದ ಮೇಲಂತೂ ಒಳ್ಳೆಯ ಉಪಾಧ್ಯಾಯರನ್ನು ಹಾಕಿ ಬಹಳ ಚೆನ್ನಾಗಿ ಕೆಲಸ ಮಾಡಿಸುತ್ತಾ ಇದ್ದಾರೆ. ಮತ್ತು ಮಣಿಪಾಲ್ ಮೆಡಿಕಲ್ ಕಾಲೇಜಿನಲ್ಲೂ ಸಹ ಉತ್ತಮವಾದಂಥ ಎಕ್ವಿಪ್‌ಮೆಂಟ್ ಮತ್ತು ಉತ್ತಮವಾದಂಥ ಅಧ್ಯಾಪಕರು ಇದ್ದಾರೆ ಎಂದು ಕೇಳಿದ್ದೇನೆ. ಮತ್ತು ನಮ್ಮ ಬೆಂಗಳೂರಿನಲ್ಲಿರುವ ಸೆಂಟ್‌ಜಾನ್ ಮೆಡಿಕಲ್ ಕಾಲೇಜನ್ನೂ ಸಹ ಡೀರೆಕಗ್ನೈಸ್ ಮಾಡುವುದಾದರೆ ಇದರಿಂದ ಹೆಚ್ಚಿನ ಕಳವಳ ಹುಡುಗರ ತಂದೆ ತಾಯಿಗಳಿಗೆ ಆಗುತ್ತದೆಯೇ ಹೊರತು ಇನ್ನಾರಿಗೂ ಆಗುವುದಿಲ್ಲ. ಆದುದರಿಂದ ಈ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳು ವಿವರಣೆ ಕೊಡಬೇಕು ಎಂದು ಕೇಳಲು ಇಷ್ಟಪಡುತ್ತೇನೆ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ (ಸಿಸಿಲ್).—ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ಎಲ್ಲದೂ ಬಂದಿದೆ.